**ನಮೋ ನಮೋ ಗುರುವಾತ|**

ನಮೋ ನಮೋ ಗುರುವಾತ ||ಪ||

ನಿನ್ನ ಚರಣಯುಗಳಿಗೆ ಕಮಲನೇತ್ರನ ದೂತ |
ನೆರೆನಂಬಿದ ಜನರ ಶ್ರಮವ ನೀಗುವ ದಾತ |
ಮೂರ್ಜಗದಿ ನಿನ್ನ ಮಹಿಮೆಯ ಬಲ್ಲರೊ ಖ್ಯಾತಾ |
ಹೇ ಕಾಳಿನಾಥ ||
ತಿಮಿರರಿಪು ನಿಭ ಅಮರ ವಂದಿತ
ಡಮರುಧರ ಪಿತ ಸಮೀರ ದೇವಾ ||ಅಪ||

ತ್ರೈತಾಯುಗದಲಿ ಅಂದು ಹನುಮಂತ |
ಶ್ರೀ ರಘುನಾಥನಲ್ಲಿಗೆ ಬಂದು ಪರಮಾತ್ಮ |
ನಿಮ್ಮಯ ಮಾತು ಕೇಳುವೆನೆಂದು ಕೈಗೊಂಡು|
ಸೇವೆಯ ನಾಥ ಜನ ಕುಮುದೆಂದು || ಕರ ಮುಗಿದು ನಿಂದು ||
ಆತರಣಿ ಕುಲ ಜಾತನುಂಗುರ |
ವಾತುರದಿ ಕೊಂಡಾತ ವೇಗದಿ | ಸೀತೆಗರ್ಪಿಸಿ ಭೀತಿಯಿಲ್ಲದೆ|
ಪಾತಕರ ಬಹು ಘಾತಿಸುದೆಯಲೊ ||೧||

ಕುಂತಿಯಲಿ ಅವತಾರ ಮಾಡಿದೆಯೊ ಕುರು |
ಕುಲಕೆ ಅಂತಕ ಖಳಕುಠಾರ ಸೀಳಿ |
ದೆಯೊ ಮಗಧನ ಸಂತರೊಡೆಯ ಉದಾರ |
ವಿಕ್ರಮನೆ ಬಹುಗುಣವಂತ ಕಲ್ಮಶ ದೂರ || ಆ ಕೀಚಕರಾ ||
ಸಂತತಿಯನಳಿದಂತ ನಿಜ ಬಲವಂತ ನಿನ್ನಯ ಪಂಥಗೆಲಿಸಿದೆ |
ದಂತಿಪುರದರಸಂತಕಾತ್ಮಜ| ನಿಂತು ನೆಲೆಸಿದೆ ಚಿಂತಾರಹಿತ ||೨||

ಕಲಿಯುಗದಿ ಮುನಿಯಾಗಿ ಪ್ರಾಣೇಶ
ವಿಠಲನ ಒಲುಮೆಯನು ಚೆನ್ನಾಗಿ |
ಗಳಿಸುತಲಿ ಸೂತ್ರಗಳೊಲಿಸಿ ಬಹುಸ್ಪಷ್ಟವಾಗಿ |
ಗ್ರಂಥಗಳ ವಿರಚಿಸಿ ಹಲವು ಮತಗಳ ನೀಗಿ| ದಂಥ ಸುನಿಯೋಗಿ||
ಕಳೆದು ಸುಜನರ ಮಲಿನವನು| ಈ ಇಳೆಯೊಳಗೆ ಬಹು ಬೆಳೆದ ನಿನ್ನ ಮತ|
ಚಲುವಯತಿಯನಗೊಲಿದು| ಸನ್ಮತಿಯ ಕಲಿಸುವದು ಕರ ಬಿಡದಲೆ ||೩||

**ಏನು ಸಾರ್ಥಕಾ ಬದುಕಿ ಏನು ಸಾರ್ಥಕಾ**

ಜಾನಕೀಶನ ಧ್ಯಾನ ಮಾಡದೆ ನಾನು ಎಂಬುವ ಹೀನ ಬದುಕಿ||ಪ||

ಎಳಿ ಎಳಿದೆನಿಯ ತುಳಸಿದಳ ತಂದು ಭಕುತಿಯಿಂದ

ಜಲಜನಾಭನ ಚರಣಕಮಲ ಗಳಿಗೆ ಅರ್ಪಿಸದವನು ಬದುಕಿ|೧|

ಹೊತ್ತರೆದ್ದು ಕ್ರಮದಲಿಂದ ಮೃತ್ತಿಕೆ ಶೌಚಾದಿ ಕರ್ಮ

ನಿತ್ಯ ಮಾಡದ್ದರಟಿ ಬಡದು ಹೊತ್ತುಗಳೆವುತಿಹನು ಬದುಕಿ|೨|

ಪತ್ನಿ ಜರಿದು ಅನ್ಯ ಸತಿಯ ರತ್ನ ಸಮನ ತಿಳಿದು ಹರಿಯ

ನರ್ತ್ನದಿಂದ ಹಾಡಿ ಸುಗತಿ ಯತ್ನ ಮಾಡದವರು ಬದುಕಿ|೩|

ಮಾತೃ ಪಿತೃಗಳಿಗೆ ಮೀರಿ ಭ್ರಾತೃಗಳೊಳು ವಂಚಿಸುತಲಿ

ಶ್ರೋತ್ರಿಯರನು ಹಳಿದು ನಿರಯ ಪಾತ್ರನಾಗುವವನು ಬದುಕಿ|೪|

ಡಂಬಕದಲಿ ಮಡಿಯ ಮಾಡಿ ನಂಬಿದವರ ಕೆಡಿಸಿ ತಾನೆ

ಉಂಬುವದಕ್ಕೆ ಪರರ ಹಾನಿ ಹಂಬಲಿಸುತಲಿಹನು ಬದುಕಿ|೫|

ಭೇದಮತವ ಪೊಂದದಲೇವೆ ಮೇಧ್ಯಾಮೇಧ್ಯ ಭಕ್ಷಿಸುತ ಕು

ಚೋದ್ಯದಿಂದ ತಂದಿ ತಾಯಿ  ಶ್ರಾದ್ಧ ಮಾಡದವನು ಬದುಕಿ|೬|

ಕಾರ್ತೀಕಾದಿ ಸ್ನಾನ ಹೋಮ ಪಾರ್ಥಸಖನ ದಿವ್ಯವಾದ

ಮೂರ್ತಿಗಳಿಗೆ ಧೂಪ ಮಂಗಳಾರ್ತಿ ಮಾಡದವನು ಬದುಕಿ|೭|

ಮಾಧವನ್ನ ರೂಪಗಳಿಗೆ ಭೇದವಿಲ್ಲವೆಂದು ತಿಳಿದು

ಸಾದರದಲಿ ಪೂಜಿಸಿ ಪ್ರಸಾದ ಉಣ್ಣದವನು ಬದುಕಿ|೮|

ಪ್ರಾಣೇಶವಿಠಲ ಪೇಳಿದದನು ಧ್ಯಾನಕೆ ತರದೆ ಅನ್ಯಶಾಸ್ತ್ರ

ಸಾನುರಾಗದಿ ಕೇಳಿ ಸುಖಿಪ ಹೀನ ಬುದ್ಧಿ ನರನು ಬದುಕಿ|೯|

**ನಮೋ ನಮೋ ರಾಮ ಕಳುಹಿಸಿದನಮ್ಮಾ |**
ಮಮ ಸ್ವಾಮಿ ಬದುಕಿಹನೆ ಪೇಳೋ ತಮ್ಮ ಪ
ವಾಸುದೇವನು ಜಗದ ಸೃಜಿಸುವನು ಕೆಡಿಸುವನು |
ನಾಶವೆಲ್ಲಿಹದು ರಘುವರ್ಯಗಮ್ಮಾ ||
ವಾಸವಾಗಿರೆ ವನದಿ ಮೃಗ ತರಲು ಪೋಗಿ ಜಗ- |
ದೀಶ ನುಡಿದನು ಕಡೆಯ ಮಾತು ತಮ್ಮ | 1 |

ಖಳ ಮಾಯೆಯಲಿ ಬರಲು ರಾಘವನು ಸಂಹರಿಸೆ |
ನೆಲಕುರುಳಿ ಕೂಗಿದನು ಅವನೇ ಅಮ್ಮಾ ||
ಬಲುವಿಂದ ಲಕ್ಷ್ಮಣನ ಬೈದು ಅಟ್ಟಿದೆ ನಾನು |
ಜಲಜಾಕ್ಷನೋರ್ವನಿಹನೇನೋ ತಮ್ಮ 2

ಅನುಜಯುಕ್ತದಿ ದೇವ ಕಪಿದಂಡು ನೆರಹಿಹನು |
ಹನುಮಂತ ನಾ ರಾಮದೂತನಮ್ಮಾ ||
ಇನಿತು ಸತ್ಯವೊ ಅನೃತವೊ ನಂಬಿಗ್ಯಾಗದು |
ಮನದ ಅನುಮಾನ ಬಿಡುವಂತೆ ಮಾಡೋ ತಮ್ಮ 3

ಸಿರಿಕಾಂತ ಶ್ರೀಮಂತ ಕರುಣದಲಿ ಕೊಟ್ಟಿಹನು |
ಗುರುತಿನುಂಗುರವನಿದು ನೋಡಿರಮ್ಮಾ ||
ಪರಮಾತ್ಮನಿಗೆ ದೂತನಹುದು ಶುಭ ವಾತರ್ಿಗಳೆ |
ಇರುವನೆಲ್ಲಿದು ವಿಸ್ತರಿಸೆಲೊ ತಮ್ಮಾ 4

ಕಾನನದೆ ಚರಿಸುತ ರವಿಸುತಗೊಲಿದು ಶುಕ್ರಜನ |
ಹಾನಿ ಮಾಡಿದನಲ್ಲೇ ಇರುವನಮ್ಮಾ ||
ಜಾನಕಿಯೆಂದೆನ್ನನು ನಿತ್ಯದಲಿ ನೆನೆಸಿ |
ಏನು ಮಾಡುವನೊ ಪೇಳುವದೋ ತಮ್ಮ 5

ನಿನ್ನಗಲಿ ವ್ಯಾಕುಲದಿ ನರರಂತೆ ಕೇಶವನು |
ಅನ್ನ ಉದಕವನೆಲ್ಲಾ ಜರಿದನಮ್ಮಾ ||
ಪನ್ನಗಾರಿ ಧ್ವಜನು ದನುಜರ ಗೆಲಿದು |
ಯನ್ನ ಕೂಡುವದು ನಾ ಕಾಣೆ ತಮ್ಮ 6

ತಾಯೆ ರಾವಣನಳಿದು ನಾನೊಯ್ವೆ ನಿನ್ನೀಗ |
ನೋಯಿಸದೆ ಹರಿಗೀಡು ಆವನಮ್ಮಾ ||
ನಾಯಕನು ನೀಂ ಭೃತ್ಯರೊಳು ತ್ವರಿತ ಬಹುದೆಂದು |
ಕಾಯಜ ಪಿತನಿಗೆ ಬಿನ್ನೈಸೊ ತಮ್ಮ 7

ಪೋಗಿ ಬರುವೆನು ನಿಮ್ಮ ಗುರುತು ಏನಿದೆ ಕೊಟ್ಟು |
ಬೇಗನಪ್ಪಣೆಯೆನಗೆ ಈವದಮ್ಮಾ ||
ನಾಗಶಯನಗೆ ರಾಗಟೆಯನಿತ್ತು ಪದಕೆ ತಲೆ |
ಬಾಗಿರುವಳೇಳದಲೆಯೆನ್ನೋ ತಮ್ಮ 8

ನಳಿನಮುಖಿಯೆ ನಮೋ ನಮೋ ದಯೆಯಿರಲಿ ಸ್ವಲ್ಪ ದಿನ |
ದೊಳಗೆ ಬರುವೆವು ಚಿಂತೆ ಬೇಡವಮ್ಮ ||
ಭಳಿ ಭಳಿರೆ ಪ್ರಾಣೇಶ ವಿಠ್ಠಲನ ಪೂರ್ಣ ದಯೆ |
ಗಳಿಸಿ ಅಜಪಟ್ಟವನು ಆಳೋ ತಮ್ಮ

ಗೋಪಾಲಕೃಷ್ಣನಿಗೆ ಮಂಗಳಾ | ಘೋರ

ಪಾರಣ್ಯ ಧನಂಜಯಗೆ ಮಂಗಳ | ಪ |

ಚಿಕ್ಕವನಾಗಿ ಬಲಿಯ ದಾನವ ಬೇಡಿ ನೆಲಾ |

ಕಿಕ್ಕಿ ತುಳಿದಂವಗೆ ಮಂಗಳಾ ||

ಸೊಕ್ಕಿದ ಜಾಂಬುನದಾಕ್ಷನ ಹುಡಿಗುಟ್ಟೇ |

ಅಕ್ಕರೆಲ್ಲರಿಗೆ ಮಾಡ್ದಗೆ ಮಂಗಳಾ 1

ಕಿಡಿಯನುಗುಳುತಲಿ ಚಟಚಟ ಕಂಬದಿಂದ |

ಒಡದು, ಬಂದವನಿಗೆ ಮಂಗಳಾ ||

ಕಡು ಕೋಪದಿಂದ ಶಾತ ಕುಂಭ ಕಶ್ಯಪುವಿನಾ |

ಪಿಡಿದೊಡಲು ಬಗದವಗೆ ಮಂಗಳಾ 2

ನುಡಿಯಲು ಜನನಿಯು ಕೇಳಿ ಪುರವ ಬಿಟ್ಟು |

ಅಡವಿಗೆ ಹೋದಂವಗೆ ಮಂಗಳಾ ||

ಮಡದೀಯಾಕೃತಿವೈದ ಸುರನ ಕೊಂದವನಿಗೆ |

ಕಡಲಾ ಮಂದಿರನಿಗೆ ಶುಭ ಮಂಗಳಾ 3

ಪಾಷಾಣಳಾದವಳ ಉದ್ಧಾರ ಮಾಡಿದವಗೇ |

ದೋಷರಹಿತನಿಗೆ ಮಂಗಳಾ ||

ಭೇಶ ಭಾಸ್ಕರ ಕೋಟಿ ತೇಜ ಹರಿಗೆ ಸ- |

ರ್ವೇಶ ಮುರಾಂತಕಗೆ ಶುಭಮಂಗಳಾ 4

ಶ್ರೀರಮಣ ಶ್ರೀಮಂತ ಪ್ರಾಣೇಶ ವಿಠ್ಠಲನೀಗೆ |

ವಾರೀಜ ನಯನಗೆ ಮಂಗಳಾ ||

ನಾರಾಯಣಗೆ ದಯಸಾಂದ್ರಗೆ ದಶ ಅವ- |

ತಾರ ಗೋವಿಂದ ವಾಮನಗೆ ಮಂಗಳಾ 5

----------------------------------------------------------------

ಇಂತಿರುವುದೇನು ಬಗೆ ರಾಮಾ ಹರಿ ಸ್ವ
ತಂತ್ರ ಶ್ರೀನಿಧಿಯೆಂದು ಪೊಗಳುತಿವೆ ವೇದ||ಪ||

ವಿಧಿಗೆ ಪದವಿತ್ತವನೇ ವನವ ಚರಿಸುವದೇನೋ
ಪದುಮ ಸದನೆಯ ರಮಣ ಬಡವನಾಗಿಹದೇನೋ
ಮದನ ಜನಕನೆ ಋಷಿಗಳಂತೆ ಆಗುವದೇನೋ
ಉದರದೊಳು ಬಹು ಜಗಗಳಿರಲೂ ಪತ್ರ
ಸದನವಾಶ್ರಯಿಸಿ ಕೊಂಡಿರುವಿ ಇದು ಏನೋ|೧|

ನಿತ್ಯತೃಪ್ತನೆ ಶಬರಿಯೆಂಜಲುಂಬುವದೇನೋ
ಉತ್ತಮ ವಿಹಗವಿರಲು ಕಾಲ್ನಡಿಗೆಯೇನೋ
ಭೃತ್ಯರು ದಿವಿಜರು ನೀಂ ಚಾಪವ ಹೊರುವದೇನೋ
ನಿತ್ಯ ಶ್ರೀ ಹೃದಯದೊಳಗಿರಲು ನಿನ್ನ ಪತ್ನಿ
ಹೋದಳೆಂದು ಚಿಂತಿಸುವದೇನೋ|೨|

ಸ್ವಾಮಿ ಅಹಿಶಯನ ತೃಣಶಾಯಿಯಾಗುವದೇನೋ
ಭೂಮಿ ನಿನ್ನೊಂದಘ್ರಿ ಸೇತು ಕಟ್ಟುವದೇನೋ
ಈ ಮರುಳು ರಕ್ಕಸರು ನಿನಗೊಂದೀದೇನೋ
ತಾಮಸರ ಮೋಹಿಸುವುದಕೆ ಭಕ್ತ ಪ್ರೇಮ
ಪ್ರಾಣೇಶವಿಠಲನೆ ಲೀಲೆಯೇನೋ|೩|

---